# ಮೆಕ್ಸಿಕೋ ಚೆರ್ರಿ

ಚಿತ್ರ, ಬರಹ:
ಆರ್.ಕೆ.ಮಧು









ಪುಟ್ಟ ಹಾಗೂ ದಟ್ಟ ಎಲೆಗಳು, ಬಾಗಿದ ಸಣ್ಣ ಸಣ್ಣ ಕೊಂಬೆಗಳು, ಅಗಲವಾಗಿ ಹರಡಿ ಸುತ್ತಲೂ ತಂಪೆರೆವ ಮನೋಹರ ಮೆಕ್ಸಿಕನ್ ಚೆರ್ರಿ. 'ಸಿಂಗಪೂರ್ ಚೆರ್ರಿ' ಎಂದೂ ಹೆಸರು ಪಡೆದಿರುವ ಈ ತಂಪಿನ ಮರದ ಮೋಹಕ್ಕೆ ಮರಳಾಗದವರು ವಿರಳ.

ಇದು ಮೂಲತಃ ಮೆಕ್ಸಿಕೋದ ಪ್ರಸಿದ್ಧ ಸಸ್ಯ. ಮಂಟೆಜಿಯಾ ಕೊಲಬುರ ಎಂಬ ವರ್ಗಮೂಲ. ಎಲ್ಲೆಂದರಲ್ಲಿ ಹೆಚ್ಚು ಶ್ರಮವಿಲ್ಲದೆ ಅತಿ ಸುಲಭದಲ್ಲಿ ಬೆಳೆಸಬಹುದು. ಪಶು ಪಕ್ಷಿಗಳಿಗೂ ಈ ಮರಗಳು ಅತ್ಯಂತ ಪ್ರಿಯ. ಮೆಕ್ಸಿಕೋ ಅಲ್ಲದೆ ಕೆರೇಬಿಯನ್ ದ್ವೀಪ ಸಮೂಹ, ಮಧ್ಯೆ ಅಮೆರಿಕಾ, ಪೆರು, ಬೊಲಿವಿಯಾ ಮುಂತಾದ ದೇಶಗಳಲ್ಲೂ ಕಂಡುಬರುತ್ತದೆ. ಸುಮಾರು 7 ರಿಂದ 12 ಮೀಟರ್ ಎತ್ತರ ಬೆಳೆಯುವ ಈ ಮರ ಬಿಳಿ ಹೂ ಹಾಗೂ ಕೆಂಪು ಹಣ್ಣುಗಳಿಂದ ತುಂಬಿಕೊಂಡಿರುತ್ತದೆ. ಈ ಹಣ್ಣುಗಳು ಅಸಂಖ್ಯ ಹಳದಿ ಬೀಜಗಳಿಂದ ತುಂಬಿದ್ದು, ಪಕ್ಷಿಗಳಿಂದಾಗಿ ಬೀಜ ಪ್ರಸಾರ ವೇಗವಾಗಿ ಹರಡುತ್ತವೆ.

ಹೂ ಕುಟುಕ, ಸೂರಕ್ಕಿ, ಪಿಕಳಾರ, ಕೋಗಿಲೆ, ಹಾಡುಗಾರ ಹಕ್ಕಿ, ಮೈನಾ, ಕಂಚುಗಾರ ಮುಂತಾದವು ಈ ಮರದ ಹಣ್ಣುಗಳನ್ನು ತಿನ್ನಲು ಸದಾ ಕಾತರಿಸುತ್ತವೆ. ಅದರಲ್ಲೂ ಕಂಚುಗಾರ ಹಕ್ಕಿಗೆ ತನ್ನ ಮರಿಗಳಿಗೆ ಇದರ ಹಣ್ಣು ತಿನ್ನಿಸುವುದೆಂದರೆ ತುಂಬಾ ಪ್ರೀತಿ! ಕೋಗಿಲೆಗಳಿಗೂ ಈ ಮರ ಅಚ್ಚುಮೆಚ್ಚು.

ರಾತ್ರಿಯಾದರೆ ಈ ಮರವನ್ನು ಹುಡುಕಿಕೊಂಡು ಬರುವ ಹಕ್ಕಿ ಬಾವಲಿ. ಇಂದು ವಿನಾಶದೆಡೆಗೆ ಮುಖ ಮಾಡಿರುವ ಈ ಹಾರಾಡುವ ಸಸ್ತನಿಗೆ ಇದರ ಹಣ್ಣು ಮುಖ್ಯ ಆಹಾರ. ಮೆಕ್ಸಿಕೋದಲ್ಲಿ ಈ ಸಸ್ಯವನ್ನು ಸಮುದ್ರದ ದಡದಲ್ಲಿ ಸಾಲು ಸಾಲಾಗಿ ನೆಟ್ಟು ಪೋಷಿಸುತ್ತಾರೆ. ಅಲ್ಲಿ ಇದರ ಹಣ್ಣನ್ನು ನಮ್ಮಲ್ಲಿ ಕಡ್ಲೇಕಾಯಿ ಮಾರುವಂತೆಯೇ ಮಾರುತ್ತಾರೆ. ಇದರ ಸೊಪ್ಪನ್ನು ಒಣಗಿಸಿ ಹದ ಮಾಡಿ ಟೀ ಮಾಡಿ ಸವಿಯುತ್ತಾರೆ.

ಮಣ್ಣಿನ ಫಲವತ್ತತೆ ಇಲ್ಲದ ಸ್ಥಳದಲ್ಲೂ ಈ ಸಸ್ಯ ಸುಲಭವಾಗಿ ಬೆಳೆಯುತ್ತದೆ. 6 ತಿಂಗಳಲ್ಲೇ ಹೂ ಬಿಡುವ ಸಸಿ, ಕೇವಲ ಒಂದೂವರೆ ವರ್ಷದಲ್ಲೇ ಬೆಳೆದು ದೊಡ್ಡ ಮರವಾಗುತ್ತದೆ. ಪುಟ್ಟ ಬಿಳೀ ಹೂ ಆಕರ್ಷಕ. ಹೊಳೆವ ಕಡುಕೆಂಪು ಹಣ್ಣು ರಸಭರಿತವಾಗಿದ್ದು, ಸಿಹಿ ರುಚಿ ಹೊಂದಿರುತ್ತದೆ. ಇತ್ತೀಚೆಗೆ ಈ ಮರ ನಮ್ಮ ದೇಶದಲ್ಲೂ ಜನಪ್ರಿಯವಾಗುತ್ತಿದೆ. ಗೊಬ್ಬರ, ಸದಾ ಕಾಲ ನೀರು ಎಂದೇನೂ ಕಾಯದ ಈ ಸಸಿಯನ್ನು ನೆಟ್ಟುಬಿಟ್ಟರೆ ಸಾಕು, ಕಡಿಮೆ ಮಳೆಯಲ್ಲೂ ಬೆಳೆಯುತ್ತದೆ. ನೀವೇಕೆ ಪ್ರಯತ್ನಿಸಬಾರದು?